ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಸುಧೀಂದ್ರರಾವ್

ಶ್ರೀ ಥಾಮಸ್ -ವಿರುದ್ಧ ಕರ್ನಾಟಕ ರಾಜ್ಯ ಬೀಚನಹಳ್ಳಿ ಪೊಲೀಸ್

ಕ್ರಿಮಿನಲ್ ಅಪೀಲುಸಂಖ್ಯೆ: 821/2010, ದಿನಾಂಕ 14 ನೇ ಜೂನ್, 2018.

ತೀರ್ಪು

ನ್ಯಾಯಮೂರ್ತಿ ಶ್ರೀ ಎನ್.ಕೆ. ಸುಧೀಂದ್ರರಾವ್:

ಎಸ್.ಸಿ.ಸಂಖ್ಯೆ: 79/2007 ರಲ್ಲಿ,ದಿನಾಂಕ: 16.07.2010 ರಂದು, ಮೈಸೂರಿನ ತ್ವರಿತಗತಿ ನ್ಯಾಯಾಲಯದ ಮಾನ್ಯ ಪೀಠಾಸೀನ ಅಧಿಕಾರಿಗಳು ಹೊರಡಿಸಿದ ಆದೇಶದ ವಿರುದ್ಧ ಈ ಅಪೀಲನ್ನು ಸಲ್ಲಿಸಲಾಗಿದ್ದು, ಅದರಲ್ಲಿ, ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾಗುವ 353 ನೇ ಮತ್ತು 307 ನೇ ಪ್ರಕರಣಗಳ ಅಡಿಯಲ್ಲಿನ ದಂಡನೀಯ ಅಪರಾಧಗಳಿಗಾಗಿ 1 ನೇ ಮತ್ತು 2 ನೇ ಆರೋಪಿಗಳ ಅಪರಾಧ ನಿರ್ಣಯವಾಗಿದ್ದು, ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾಗುವ 307 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಮೂರು ವರ್ಷಗಳ ಅವಧಿಗೆ ಸಾದಾ ಕಾರಾವಾಸದ ಶಿಕ್ಷೆಗೆ ಗುರಿಪಡಿಸಲಾಯಿತು.

2. ಈ ಮೊಕದ್ದಮೆಯ ಅಪೀಲುದಾರನು ವಿಚಾರಣಾ ನ್ಯಾಯಾಲಯದ ಮುಂದೆ 2 ನೇ ಆರೋಪಿಯಾಗಿರುವನು.

3. ಹೆಚ್.ಡಿ. ಕೋಟೆಯ ಬೇಗೂರಿನ ಗುಂಡ್ರೆ ವಲಯದ ಅರಣ್ಯ ಕಾವಲುಗಾರನಾಗಿರುವ ಸುಮಾರು 32 ವಯಸ್ಸಿನ ರವಿಕುಮಾರ್ ಬಿನ್ ಸಣ್ಣಲಿಂಗಯ್ಯ ಎಂಬಾತನು ಈ ದೂರನ್ನು ದಾಖಲಿಸಿದ್ದಾನೆ.ವಿಚಾರಣಾ ಅವಧಿಯಲ್ಲಿ ನಿಶಾನೆ-ಪಿ .1 ಎಂದು ಗುರುತಿಸಲಾಗಿರುವ ದೂರಿನ ಸಾರಾಂಶವೇನೆಂದರೆ:

ದಿನಾಂಕ:01.10.2006 ರ ರಾತ್ರಿ 10.00 ಗಂಟೆಗೆ, ಎನ್. ಬೇಗೂರು ಅರಣ್ಯ ಕಚೇರಿಯಿಂದ ಖಚಿತ ಮಾಹಿತಿ ಪಡೆದ ಮೇರೆಗೆ, ದೂರುದಾರ ವಲಯ ಅರಣ್ಯ ಅಧಿಕಾರಿ, ಶ್ರೀ ಕರುಣಾಕರನ್, ಹೆಚ್ಚುವರಿ ಅರಣ್ಯ ಪಾಲಕ, ಶ್ರೀ ರಂಗಣ್ಣ, ರೈಟರ್ ಇವರುಗಳು ಕಾವಲುಗಾರರಾದ ಶ್ರೀ ಮರಿಯಪ್ಪ ಮತ್ತು ಶ್ರೀ ಸೋಮು ಎಂಬುವವರೊಂದಿಗೆ, ಶ್ರೀ ಮೋಹನ್ ಚಲಾಯಿಸುತ್ತಿದ್ದ ಇಲಾಖೆಯ ಜೀಪಿನಲ್ಲಿ, ಬೇಗೂರು ಅರಣ್ಯ ಪ್ರದೇಶದಲ್ಲಿ ಪಹರೆ ಕೆಲಸಕ್ಕಾಗಿ ಹೋಗಿದ್ದರು.ಮಧ್ಯ ರಾತ್ರಿ ಸುಮಾರು 12.00 ಗಂಟೆಯಲ್ಲಿ, ಕನ್ನೇಗಾಲದಲ್ಲಿ ಅವರು ಪಹರೆ ಕಾಯುತ್ತಿದ್ದಾಗ, ರಾತ್ರಿ ಸಮಯದಲ್ಲಿ ನದಿ ಒಡ್ಡಿನಲ್ಲಿ ಮಚ್ಚು, ಬಡಿಗೆ ಮುಂತಾದಂಥ ಆಯುಧಗಳನ್ನು ಹೊಂದಿದ್ದ 10 ರಿಂದ 11 ವ್ಯಕ್ತಿಗಳು ಅರಣ್ಯ ಪ್ರದೇಶದಿಂದ ಮರದ ದಿಮ್ಮಿಗಳನ್ನು ಒಯ್ಯುತ್ತಿದ್ದುದನ್ನು ನೋಡಿದರು.ಪಹರೆ ತಂಡ ಅವರನ್ನು ಬೆನ್ನಟ್ಟಿಕೊಂಡು ಹೋಗಿ ಅವರ ಪೈಕಿ ಇಬ್ಬರನ್ನು ಹಿಡಿದರು ಮತ್ತು ಉಳಿದವರು ತಪ್ಪಿಸಿಕೊಂಡರು.ಹಠಾತ್ತಾಗಿ, ಅವರಲ್ಲಿ ಒಬ್ಬಾತನು ಕರುಣಾಕರನ್ನಿಂದ ಇಲಾಖೆಯ ರೈಫಲ್‌ಅನ್ನು ಕಸಿದುಕೊಂಡು, ದೂರುದಾರನಿಗೆ ಮತ್ತು ಪಹರೆ ಸಿಬ್ಬಂದಿಗೆ ತಮ್ಮ ಕರ್ತವ್ಯ ನಿರ್ವಹಿಸುವುದಕ್ಕೆ ಅಡ್ಡಿಯುಂಟು ಮಾಡಿದನು.ದೂರುದಾರನನ್ನು ಹತ್ಯೆ ಮಾಡುವ ಉದ್ದೇಶದಿಂದ ಸದರಿ ವ್ಯಕ್ತಿಯು ಕಾಲಿಗೆ ಗುಂಡು ಹಾರಿಸಿದನು ಮತ್ತು ಪಹರೆ ಸಿಬ್ಬಂದಿ ಸದರಿ ವ್ಯಕ್ತಿಯಿಂದ ರೈಫಲ್ಲನ್ನು ಕಿತ್ತುಕೊಂಡರು.ಇತರ ವ್ಯಕ್ತಿಗಳು ಓಡಿ ಹೋದರು.ಆದಾಗ್ಯೂ, ಮೇಲೆ ಹೇಳಿದಂತೆ ಇಬ್ಬರು ವ್ಯಕ್ತಿಗಳನ್ನು ಅಭಿರಕ್ಷೆಗೆ ತೆಗೆದುಕೊಳ್ಳಲಾಯಿತು.

4. ತನಿಖೆ ಮಾಡಲಾಗಿ, ರೈಫಲ್ ಚಲಾಯಿಸಿದಂಥ ವ್ಯಕ್ತಿಯು ಥಂಗಚ್ಚನ್, ಬಿನ್ ವರ್ಗಿಸ್, 38 ವರ್ಷ, ಪಡಿಚೇರಾ ಗ್ರಾಮ, ಕೇರಳದ ನಿವಾಸಿ ಎಂಬುದು ತಿಳಿದುಬಂದಿತು.ದೂರುದಾರನಿಗೆ ಕಾಲಿನಲ್ಲಿ ತೀವ್ರ ಗಾಯಗಳಾಗಿದ್ದರಿಂದ ರಕ್ತ ಹರಿಯುತ್ತಿತ್ತು, ಅವರನ್ನು ಇಲಾಖಾ ಜೀಪಿನಲ್ಲಿ ಕೆಂಚೇನಹಳ್ಳಿಯಲ್ಲಿರುವ ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಯಿತು ಮತ್ತು ತರುವಾಯ ಅವನನ್ನು ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು.

5. ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾಗುವ 143, 147, 148, 447, 353, 307 ನೇ ಪ್ರಕರಣಗಳ ಹಾಗೂ ವನ್ಯಜೀವಿ ಸಂರಕ್ಷಣಾ ಅಧಿನಿಯಮದ 2, 9, 31, 51, 52 ನೇ ಪ್ರಕರಣಗಳ ಮತ್ತು ಆಯುಧಗಳ ಅಧಿನಿಯಮದ 3 ಮತ್ತು 37 ನೇ ಪ್ರಕರಣಗಳ ಅಡಿಯಲ್ಲಿನ ದಂಡನೀಯ ಅಪರಾಧಗಳಿಗಾಗಿ ಅಪರಾಧಸಂಖ್ಯೆ: 87/2006 ರಲ್ಲಿ ಪ್ರಕರಣವನ್ನು ದಾಖಲಿಸಲಾಯಿತು.ತನಿಖೆ ನಡೆಸುವುದಕ್ಕೆ, ಮಹಜರ್ ಬರೆಯುವುದಕ್ಕೆ, ಸ್ಥಳ ಮಹಜರ್ ಮಾಡುವುದಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಮತ್ತು ಔಪಚಾರಿಕ ಪ್ರಕ್ರಿಯೆಗಳನ್ನು ನಡೆಸಲಾಯಿತು.

6. ಮಾನ್ಯ ಸತ್ರ ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ, ಭಾರತ ದಂಡ ಸಂಹಿತೆಯ 353 ನೇ ಮತ್ತು 307 ನೇ ಪ್ರಕರಣಗಳ ಅಡಿಯಲ್ಲಿನ ದಂಡನೀಯ ಅಪರಾಧಗಳಿಗಾಗಿ ಅಪೀಲುದಾರ -2 ನೇ ಆರೋಪಿಯ ಅಪರಾಧ ನಿರ್ಣಯಿಸಿತು ಮತ್ತು ಇತರ ಅಪರಾಧಗಳನ್ನು ಖುಲಾಸೆ ಮಾಡಲಾಯಿತು.ಅಲ್ಲದೆ ಅವನಿಗೆ, ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾಗುವ 353 ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಗಳಿಗಾಗಿ ಎರಡು ವರ್ಷಗಳ ಸಾದಾ ಕಾರಾವಾಸದ ಶಿಕ್ಷೆಯನ್ನು ಹಾಗೂ ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾಗುವ 307 ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಗಳಿಗಾಗಿ ಮೂರು ವರ್ಷಗಳ ಸಾದಾ ಕಾರಾವಾಸದ ಶಿಕ್ಷೆಯನ್ನು ವಿಧಿಸಲಾಯಿತು.ಸದರಿ ತೀರ್ಪಿನಿಂದ ಹಾಗೂ ಅಪರಾಧ ನಿರ್ಣಯದ ಮತ್ತು ಶಿಕ್ಷೆಯ ಆದೇಶದಿಂದ ಬಾಧಿತನಾಗಿ 2 ನೇ ಆರೋಪಿ-ಥಾಮಸ್ ಈ ಅಪೀಲನ್ನು ಸಲ್ಲಿಸಿರುವನು.

7. ಅಪೀಲುದಾರ -2 ನೇ ಆರೋಪಿ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಅಮರ್ ಕೋರೆ ಮತ್ತು ಪ್ರತಿವಾದಿ-ರಾಜ್ಯದ ಪರ ಮಾನ್ಯ ಉಚ್ಚ ನ್ಯಾಯಾಲಯ ಸರ್ಕಾರಿ ವಕೀಲರ ವಾದಗಳನ್ನು ನಾನು ಆಲಿಸಿದ್ದೇನೆ.

8. ಅಪೀಲುದಾರನ ಪರ ಮಾನ್ಯ ನ್ಯಾಯವಾದಿಗಳು, ದೂರು ಮತ್ತು ಪ್ರಾಸಿಕ್ಯೂಷನ್‌ನ ಸಾಕ್ಷ್ಯಗಳು ಸ್ಪಷ್ಟವಾಗಿಲ್ಲದೆ ಸಂಪೂರ್ಣವಾಗಿ ವಿರೋಧಾಭಾಸಗಳಿಂದ ಕೂಡಿವೆ ಎಂದು ನಿವೇದಿಸಿಕೊಂಡಿದ್ದಾರೆ.ದೂರು ಪೂರ್ಣವಾಗಿ ಉತ್ಪ್ರೇಕ್ಷೆಗಳಿಂದ ಕೂಡಿರುವುದರಿಂದ ಅವರು ಸಹಜ ಸ ಂ ಗತಿಗಳನ್ನು ಪ್ರಸ್ತುತಪಡಿಸಿರುವುದಿಲ್ಲ.ಇದಲ್ಲದೆ ಅವರು, ದೂರು, ಪ್ರಥಮ ಮಾಹಿತಿ ವರದಿ ಅಥವಾ ಅಂತಿಮ ವರದಿಯಲ್ಲಿ ಹೇಳಿದಂಥ ಘಟನೆಯೇ ನಡೆದಿರಲಿಲ್ಲವೆಂದು ನಿವೇದಿಸಿಕೊಂಡಿರುವರು.ಇದಲ್ಲದೆ ಅವರು, ಮೊಕದ್ದಮೆಯಲ್ಲಿ ಅಪೀಲುದಾರನು 2 ನೇ ಆರೋಪಿಯಾಗಿದ್ದು, ವಿಚಾರಣಾ ನ್ಯಾಯಾಲಯದ ಮುಂದೆ ಆತನ ವಿರುದ್ಧ ಯಾವುದೇ ವ್ಯಕ್ತಿ ಕೃತ್ಯಗಳನ್ನು ಆರೋಪಿಸಿರುವುದಿಲ್ಲವೆಂದು ನಿವೇದಿಸಿಕೊಂಡಿರುವರು.ಇದಲ್ಲದೆ, ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾದ 307 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ ಅಪೀಲುದಾರನ ಅಪರಾಧ ನೀರ್ಣಯಿಸಲು ಮತ್ತು ಕಠಿಣವಾಗಿರುವ ಶಿಕ್ಷೆಯನ್ನು

ವಿಧಿಸುವುದಕ್ಕೆ ಸಹ ಮಾನ್ಯ ನ್ಯಾಯಾಧೀಶರು ಯಾವುದೇ ಕಾರಣಗಳನ್ನು ನೀಡಿಲ್ಲವೆಂದು ನಿವೇದಿಸಿಕೊಂಡಿರುವರು.

9. ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು, ಘಟನೆ ನಡೆದ ಸ್ಥಳವು ಅರಣ್ಯ ಪ್ರದೇಶವಾಗಿದ್ದು, ಗಮನಿಸಲಾದ ಸಂದರ್ಭಗಳು ಆರೋಪಿಯ ಪಾಶವೀ ಕೃತ್ಯಗಳನ್ನು ಕುರಿತು ಹೇಳುತ್ತವೆ ಎಂದು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ, ಆರೋಪಿಗಳು ನೈಸರ್ಗಿಕ ಸಂಪನ್ಮೂಲ, ಅರಣ್ಯ ಮತ್ತು ಪರಿಸರದ ವಿರುದ್ಧ ಮಾತ್ರವಲ್ಲದೆ, ಯಾವುದೇ ತಪ್ಪಿಲ್ಲದೆ ತಮ್ಮ ಪಾಡಿಗೆ ತಾವು ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದ ದೂರುದಾರ ಮತ್ತು ಇತರ ಅರಣ್ಯ ಅಧಿಕಾರಿಗಳ ವಿರುದ್ಧ ಅಪರಾಧ ಎಸಗಿದ್ದಾರೆ ಎಂದು ನಿವೇದಿಸಿಕೊಂಡಿರುವರು.ಇದಲ್ಲದೆ ಅವರು, ಇತರ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ ಮತ್ತು ಇದು ಅಪರಾಧದಲ್ಲಿ ಪಾಲುದಾರನಾಗಿರುವ ಪ್ರಸ್ತುತ ಆರೋಪಿ ಬಗ್ಗೆ ಸಾಕಷ್ಟು ವಿಷಯವನ್ನು ಹೇಳುತ್ತದೆಂದು ನಿವೇದಿಸಿಕೊಂಡಿರುವರು.

10. ವಿಚಾರಣಾ ನ್ಯಾಯಾಲಯದ ಮುಂದೆ ಲಭ್ಯವಿದ್ದ ಸಾಕ್ಷ್ಯ ಎಲಾ ಮತ್ತು ಪುರಾವೆಗಳೆಂದರೆ, ಪಿಡಬ್ಲ್ಯು .1 ರಿಂದ 18 ರವರೆಗಿನ ಸಾಕ್ಷಿದಾರರ ಮೌಖಿಕ ಸಾಕ್ಷ್ಯಗಳು ಮತ್ತು ನಿಶಾನೆ-ಪಿ 1 ರಿಂದ ಪಿ .19 ರವರೆಗಿನ ದಸ್ತಾವೇಜುಗಳು ಹಾಗೂ ಎಮ್ಒ 1 ರಿಂದ 5 ರವರೆಗಿನ ಮುದ್ದೆ ಮಾಲುಗಳು.

11. ಅರಣ್ಯ ಪಾಲಕ, ಕಾವಲುಗಾರರು ಮತ್ತು ಇತರ ಸಿಬ್ಬಂದಿಯು ಸೇರಿದಂತೆ ಒಟ್ಟು ಒಂಭತ್ತು ಸದಸ್ಯರನ್ನು ಒಳಗೊಂಡ ಪಹರೆ ತಂಡವು, ಇಲಾಖೆಯು ಒದಗಿಸಿದ ಜೀಪಿನಲ್ಲಿ ಪಹರೆ ಕಾಯುತ್ತಿದ್ದರು ಎಂಬುದು ಸಂಕ್ಷಿಪ್ತವಾಗಿ ಪ್ರಾಸಿಕ್ಯೂಷನ್ ಕ್ಲೇಮಾಗಿದೆ.

12. ದೂರುದಾರ ರವಿಕುಮಾರ್ ಪಿಡಬ್ಲ್ಯು -1 ಆಗಿರುವನು.ಆತನ ಮೌಖಿಕ ಸಾಕ್ಷ್ಯದಲ್ಲಿ,ದಿನಾಂಕ: 01.10.2006 ರಂದು ರಾತ್ರಿ 10.00 ಗಂಟೆಗೆ ಇಲಾಖೆಯ ಜೀಪಿನಲ್ಲಿ ಸ್ವತಃ ತಾನು ಮತ್ತು ಇತರ ಅರಣ್ಯ ಸಿಬ್ಬಂದಿಯು ಬೇಗೂರು ಅರಣ್ಯ ಪ್ರದೇಶದಲ್ಲಿ ಪಹರೆ ಕಾಯುತ್ತಿದ್ದುದಾಗಿ; 10 ರಿಂದ 11 ಜನರಿರುವ ಆರೋಪಿತ ತಂಡವು ಮರದ ದಿಮ್ಮಿಗಳನ್ನು ಸ್ಥಳಾಂತರಿಸಿದ್ದನ್ನು ನೋಡಲಾಗಿ, ಅವರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆಂದು; ವಾಸ್ತವವಾಗಿ, ಇಬ್ಬರನ್ನು ಹೊರತುಪಡಿಸಿ ಉಳಿದವರು ತಪ್ಪಿಸಿಕೊಂಡರೆಂದು; ಅವರ ಪೈಕಿ ಒಬ್ಬನಾದ ( 1 ನೇ ಆರೋಪಿ) ಥಂಗಚ್ಚನ್ ಎಂಬಾತನು ಒಬ್ಬ ಸಿಬ್ಬಂದಿಯಿಂದ ರೈಫಲ್ ಅನ್ನು ಕಿತ್ತುಕೊಂಡನು; ಥಂಗಚ್ಚನ್ ದೂರುದಾರನ ಮೇಲೆ ಒತ್ತಾಯಪೂರ್ವಕವಾಗಿ ಗುಂಡು ಹಾರಿಸುವ ಮೂಲಕ ಕೊಲ್ಲಲು ಹಾಗೂ ದೂರುದಾರ ಮತ್ತು ಇತರ ಸಿಬ್ಬಂದಿಯು ತಮ್ಮ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸಲು ಅಡ್ಡಿಪಡಿಸಲು ಪ್ರಯತ್ನಿಸಿದನು ಎಂಬುದಾಗಿ ತಮ್ಮ ದೂರಿನ ನಿರೂಪಣೆಯಲ್ಲಿ ಪುನರುಚ್ಚರಿಸಿದ್ದಾರೆ.

13. ಗುಂಡು ಹಾರಿಸಿದ ಕಾರಣದಿಂದ ದೂರುದಾರನು ಗಾಯಗೊಂಡಿದ್ದರಿಂದಾಗಿ ಈ ಮೊಕದ್ದಮೆಯಲ್ಲಿನ ದೂರಿನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು.ನಿಶಾನೆ ಪಿ .14 ಇದು ದೂರುದಾರನ ಗಾಯದ ಪ್ರಮಾಣಪತ್ರವಾಗಿದೆ.ಗಾಯಗಳ ಪೈಕಿ, ಕ್ರಮಸಂಖ್ಯೆ: 1 ರಲ್ಲಿರುವ ಗಾಯವು ಗಂಭೀರವಾದುದೆಂದು ಹೇಳಲಾಗಿದೆ.

14. ಮಾನ್ಯ ನ್ಯಾಯವಾದಿ ಶ್ರೀ ಅಮರ್ ಕೋರೆಯವರು, ದೂರುದಾರನ ದೂರು ಮತ್ತು ಸಾಕ್ಷ್ಯಗಳ ನಡುವೆ ವಿರೋಧಾಭಾಸವಿದ್ದು, ಮೊದಲಿನ ಸಂದರ್ಭದಲ್ಲಿ, ಸದರಿ ದೂರುದಾರನ ರೈಫಲ್‌ಅನ್ನು

ಕಸಿದುಕೊಳ್ಳಲಾಗಿತ್ತು ಎಂದು ಹೇಳಿದ್ದರೆ, ಸಾಕ್ಷ್ಯದಲ್ಲಿ ರೈಫಲ್ ಪಹರೆ ಸಿಬ್ಬಂದಿಯ ಪೈಕಿ ಒಬ್ಬರಾದ ಕರುಣಾಕರನ್ ಎಂಬಾತನ ಕೈಯಲ್ಲಿತ್ತು ಎಂದು ಹೇಳಿದ್ದಾನೆ ಎಂಬುದಾಗಿ ವಾದಿಸಿದ್ದಾರೆ.ಹಾಗಾಗಿ, ರೈಫಲ್‌ಅನ್ನು ಹಿಡಿದುಕೊಳ್ಳುವ ವಿಚಾರಕ್ಕೆ ಸಂಬಂಧಿಸಿದಂತೆ, ವ್ಯಕ್ತಿಗೆ ಸಂಬಂಧಪಟ್ಟಷ್ಟರಮಟ್ಟಿಗೆ ವ್ಯತ್ಯಾಸವಿದೆ.ದೂರುದಾರನು, ರೈಫಲ್‌ಅನ್ನು ಕಸಿದುಕೊಂಡ ಹಾಗೂ ದೂರುದಾರನನ್ನು ಮತ್ತು ಇತರರನ್ನು ತಡೆದ ನಂತರ, ದೂರುದಾರನನ್ನು ಕೊಲೆ ಮಾಡಲು ಪ್ರಯತ್ನಿಸಿದ ಆರೋಪಿಯನ್ನು ಗುರುತಿಸಿದ್ದಾರೆ.ಎದೆಯ ಮೇಲೆ ಉಂಟಾದ ಗಾಯಗಳ ಬಗ್ಗೆ ಸಹ ಅವನು ಹೇಳಿದ್ದಾನೆ.

15. ದೂರಿನಲ್ಲಿ ಲಭ್ಯವಿರದ ಮತ್ತು ಸಾಕ್ಷ್ಯದಲ್ಲಿ ದೂರುದಾರನು ಹೇಳಿರುವ ನಿರೂಪಣೆಯೆಂದರೆ, ರೈಫಲ್‌ಅನ್ನು ದೂರುದಾರನ ಕಡೆಗೆ ಗುರಿಯಿಡಲಾಗಿತ್ತು, 1 ನೇ ಆರೋಪಿಯು ಇನ್ನೇನು ಗುಂಡು ಹಾರಿಸಬೇಕೆಂದಿದ್ದಾಗ, ದೂರುದಾರನು ಬ್ಯಾರೆಲ್‌ಅನ್ನು ಕೆಳ ಮುಖವಾಗಿ ಎಳೆದನು ಹಾಗೂ ಆ ಕಾರಣದಿಂದಾಗಿ, ಅದು ಎಡ ಕಾಲಿನ ಕಡೆಗೆ ನಿರ್ದೇಶಿತವಾಗಿತ್ತು, ಇಲ್ಲದೆ ಹೋಗಿದ್ದರೆ ಇದು ಮಾರಣಾಂತಿಕವಾಗುತ್ತಿತ್ತು ಎಂಬುದಾಗಿದೆ.ದೂರುದಾರನು ಆಯುಧವನ್ನು ಸಹ ಗುರುತಿಸಿದ್ದಾರೆ.ಆರೋಪಿಯ ವಕೀಲರು ಆತನನ್ನು ಪಾಟಿ ಸವಾಲು ಮಾಡಿದ್ದಾರೆ.

16. ಪಿಡಬ್ಲ್ಯು .2-ಕರುಣಾಕರನ್ ಪಹರೆ ತಂಡದೊಂದಿಗೆ ಇದ್ದ ವ್ಯಕ್ತಿಯೆಂದು ಹೇಳಲಾಗಿದೆ.ಅವರು ಆರೋಪಿಗಳನ್ನು ಸಹ ಗುರುತಿಸಿದ್ದಾರೆ.ದೂರುದಾರನೆಡೆ 1 ನೇ ಆರೋಪಿಯು ರೈಫಲ್‌ಅನ್ನು ಗುರಿ ಇಟ್ಟಿದ್ದಾಗ, ತಾನು ಅದನ್ನು ಕೆಳಮುಖವಾಗಿ ಎಳೆದದ್ದರಿಂದ, ದೂರುದಾರನಿಗೆ ಎದೆಗೆ ಗಾಯವಾಗುವುದು ತಪ್ಪಿತು.ಆದಾಗ್ಯೂ, ಎಡಗಾಲಿನ ಹೆಬ್ಬೆರಳಿನ ಬಳಿ ಗುಂಡು ಹೊಕ್ಕಿತು ಎಂದೂ ಸಹ ಅವರು ಹೇಳಿಕೆ ನೀಡಿದ್ದಾನೆ.

17. ಪಿಡಬ್ಲ್ಯು 3-ಬಸವರಾಜು, ಎಸಿಎಫ್ ಇವರು ಪಹರೆ ತಂಡದಲ್ಲಿ ಒಬ್ಬ ಸದಸ್ಯರಾಗಿದ್ದು, ದೂರವಾಣಿ ಮೂಲಕ ವಿಶ್ವಾಸಾರ್ಹ ಮಾಹಿತಿಯನ್ನು ಪಡೆದ ನಂತರ ಪಹರೆ ತಂಡವು, ಕರ್ನಾಟಕ ಮತ್ತು ಕೇರಳದ ಗಡಿ ರೇಖೆಯ ನಡುವಿರುವ ಕನ್ನೆಗಾಲ ಹೊಳೆ ಹತ್ತಿರದ ಅರಣ್ಯ ಪ್ರದೇಶಕ್ಕೆ ಹೋದಾಗ, ಸದರಿ ಸ್ಥಳದಲ್ಲಿ, ಅವರು 9 ರಿಂದ 10 ಜನರಿರುವುದನ್ನು ಮತ್ತು ಅವರು ಕೈಗೊಡಲಿಗಳನ್ನು ಹೊಂದಿರುವುದನ್ನು ನೋಡಿದರು; ಅವರ ಮಾತುಗಳನ್ನು ಆಲಿಸಿ, ಪಹರೆ ತಂಡವು ಸ್ಥಳಕ್ಕೆ ಹೋಗಿತ್ತು; ಅವರಲ್ಲಿ ಕೆಲವರು, ಅವರಿಗೆ ಸೇರಿದ ಜೀಪಿನೊಳಗೆ ಮರದ ದಿಮ್ಮಿಗಳನ್ನು ಹೇರುತ್ತಿದ್ದರೆಂದು, ಅವರು ಅಧಿಕೃತ ಕರ್ತವ್ಯ ನಿರ್ವಹಿಸಲು ತಮಗೆ ಅಡ್ಡಿಯುಂಟು ಮಾಡಿದರು ಎಂಬುದನ್ನು ಒತ್ತಿ ಹೇಳಿದ್ದಾರೆ.ಈ ಸಾಕ್ಷಿದಾರರು D ಸಹ, ದಸ್ತಾವೇಜುಗಳು, ಮಹಜರ್ ಮತ್ತು ಇತರ ಔಪಚಾರಿಕ ಪ್ರಕ್ರಿಯೆಗಳ ಬಗ್ಗೆ ಮಾತನಾಡಿದ್ದಾರೆ.

18. ಲೋಕೇಶ್ ಮೂರ್ತಿ-ಪಿಡಬ್ಲ್ಯು .4, ಅರಣ್ಯಾಧಿಕಾರಿ, ಸುಮಾರು 25 ವರ್ಷ ಇವರು ಘಟನೆ ಬಗ್ಗೆ ಹೇಳಿದ್ದಾರೆ.ಅವರು ಆರೋಪಿ ಮತ್ತು ಇತರರನ್ನು ಗುರುತಿಸಿದ್ದಾರೆ.ಅವರೂ ಸಹ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ.ಇತರ ಆರೋಪಿಗಳ ಇರುವಿಕೆ ಮತ್ತು ಘಟನೆ ಬಗ್ಗೆ ಸಹ ಅವರು ಮಾತನಾಡಿದ್ದಾರೆ.

19. ಗೋಪಾಲ-ಪಿಡಬ್ಲ್ಯು .5, ಅರಣ್ಯ ಪಾಲಕ, 48 ವರ್ಷ. ಅವರ ಸಾಕ್ಷ್ಯದ ಸಾರಾಂಶವೆಂದರೆ, ಪಿಡಬ್ಲ್ಯು .1 ರಿಂದ 4 ಇವರ ಮೊದಲಿನ ಸಾಕ್ಷ್ಯವನ್ನು ಅವರು ಪುನರುಚ್ಚರಿಸಿರುವುದು.ಅವರು ಸಹ ಆರೋಪಿಯನ್ನು

ಗುರುತಿಸಿದ್ದಾರೆ ಹಾಗೂ ಕರ್ನಾಟಕ ಮತ್ತು ಕೇರಳ ರಾಜ್ಯಗಳ ನಡುವಿರುವ ಕನ್ನೆಗಾಲ ಅರಣ್ಯ ಪ್ರದೇಶದಿಂದ ಜೀಪಿನೊಳಗೆ ಇತರ ಆರೋಪಿಗಳು ಮರದ ದಿಮ್ಮಿಗಳನ್ನು ಹೇರುತ್ತಿದ್ದ ಬಗ್ಗೆ ಸಹ ಹೇಳಿದ್ದಾರೆ.

20. ಸೋಮಶೇಖರ್-ಪಿಡಬ್ಲ್ಯು., ಅರಣ್ಯ ಕಾವಲುಗಾರ ಮತ್ತು ಅವರ ಸಾಕ್ಷ್ಯವು ಪಿಡಬ್ಲ್ಯು ಅಶ್ ನೀಡಿದ ಸಾಕ್ಷ್ಯದಂತೆಯೇ ಇದೆ. ಜೀಪ್ ಚಾಲಕರಾಗಿದ್ದ ಜೈಮನ್-ಪಿಡಬ್ಲ್ಯು.ಮತ್ತು ಕಚೇರಿ ಸಹಾಯಕ ರಂಗಣ್ಣ-ಪಿಡಬ್ಲ್ಯು ಇವರಿಬ್ಬರೂ ಇತರ ಸಾಕ್ಷಿದಾರರು ಹೇಳಿದಂಥ ಅದೇ ವಿಷಯದ ಬಗ್ಗೆ ಹೇಳಿಕೆ ನೀಡಿದ್ದಾರೆ.

21. ಮರಿಯಪ್ಪ-ಪಿಡ ಬು .9, ಅರಣ್ಯ ಕಾವಲುಗಾರ ಮತ್ತು ತಿಮ್ಮಯ್ಯ-ಪಿಡಬ್ಲ್ಯು .10, ಕಾವಲುಗಾರ ಇವರು ಆರೋಪಿತ ಘಟನೆಗೆ ಪ್ರತ್ಯಕ್ಷ ಸಾಕ್ಷಿದಾರರಾಗಿರುವರೆಂದು ಹೇಳಲಾಗಿದ್ದು, ಅವರು ಮಹಜರನ್ನು ಬರೆದ ಬಗ್ಗೆ ಹೇಳಿಕೆ ನೀಡಿದ್ದಾರೆ.

22. ದೂರುದಾರ-ಪಿಡಬ್ಲ್ಯು.ಮತ್ತು ಪಿಡಬ್ಲ್ಯು .2 ರಿಂದ 9, ಅರಣ್ಯ ಸಿಬ್ಬಂದಿ ಇವರ ಸಾಕ್ಷ್ಯ ಹಾಗೂ ಅವರ ಹೇಳಿಕೆ ಮತ್ತು ಒಟ್ಟು ಸಾರಾಂಶ ಇವು ಘಟನೆ ನಡೆದ ಬಗ್ಗೆ ಇದ್ದು, ಅದರಲ್ಲಿ, ಪಹರೆ ತಂಡವು ಸರ್ಕಾರಿ ಜೀಪಿನಲ್ಲಿ ಹೊಳೆಯ ಹತ್ತಿರ ಕನ್ನೆಗಾಲ ಅರಣ್ಯದ ಬಳಿ ಪಹರೆ ಕಾಯುತ್ತಿದ್ದರು; ಆಗ ಮಧ್ಯ ರಾತ್ರಿ 12.00 ಗಂಟೆ ಆಗಿತ್ತು; ಅವರಿಗೆ ಆರೋಪಿಗಳು ತಮ್ಮ ಜೀಪಿಗೆ ಮರದ ದಿಮ್ಮಿಗಳನ್ನು ಹೇರುವ ಕಾವ್ಯದಲ್ಲಿ ತೊಡಗಿದ್ದು ಕಂಡುಬಂದಿತು; ಪಹರೆ ತಂಡವನ್ನು ಕಂಡ ಕೂಡಲೇ ಅವರು ಓಡಲಾರಂಭಿಸಿದರು; ಆದಾಗ್ಯೂ, ಪಹರೆ ತಂಡವು 9 ರಿಂದ 11 ವ್ಯಕ್ತಿಗಳ ಪೈಕಿ ಕೇವಲ ಇಬ್ಬರನ್ನು ಹಿಡಿದರು; ಈ ನಡುವೆ, 1 ನೇ ಆರೋಪಿಯು ರೈಫಲ್‌ಅನ್ನು ಕಸಿದುಕೊಂಡು, ದೂರುದಾರನ ಕಡೆಗೆ ಗುಂಡು ಹಾರಿಸಲು ಗುರಿ ಇಟ್ಟಿದ್ದನು; ಇತರರು ರೈಫಲ್‌ಅನ್ನು ಎಳೆದರಾದ್ದರಿಂದ, ದೂರುದಾರನ ಎಡಗಾಲಿಗೆ ಗುಂಡಿನ ಗಾಯಗಳಾದವು ಎಂದು ಹೇಳಲಾಗಿದೆ.ಇದಲ್ಲದೆ ಅವರು ಜಪ್ತಿ ಮಹಜರ್, ಸ್ಥಳ ಮಹಜರ್ ಮತ್ತು ಮುದ್ದೆ ಮಾಲು ಎಮ್.1ನ್ನು ಜಪ್ತಿ ಮಾಡಿದ ಬಗ್ಗೆ ಸಹ ಹೇಳಿಕೆ ನೀಡಿದ್ದಾರೆ.

23. ಈ ಘಟನೆಯುದಿನಾಂಕ: 01/02.10.2006 ರ ಮಧ್ಯರಾತ್ರಿ 12 ಗಂಟೆ ಅವಧಿಯಲ್ಲಿ, ಕನ್ನೆಗಾಲ, ಪದಿಚೇರಾ ಗ್ರಾಮದಲ್ಲಿ ನಡೆದಿರುವುದಾಗಿ ಹೇಳಲಾಗಿದೆ.ಇದಲ್ಲದೆ, 10 ಜನರಿದ್ದರೆಂದು ಹೇಳಲಾಗಿರುವ ಪಹರೆ ತಂಡವು ಕೇವಲ ಇಬ್ಬರು ಆರೋಪಿಗಳನ್ನು ಸೆರೆ ಹಿಡಿದಿದ್ದು, ಗಾಯಗೊಂಡ ಪಿಡಬ್ಲ್ಯು -1 ನ್ನು ಕೆಂಚನಹಳ್ಳಿ ವಿವೇಕಾನಂದ ಆಸ್ಪತ್ರೆಗೆ ಮತ್ತು ತರುವಾಯ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಗೆ ದಾಖಲಿಸಲಾಯಿತು ಎಂದು ಹೇಳಲಾಗಿದೆ.

24. ಗಾಯಗೊಂಡ ದೂರುದಾರನನ್ನು ಪರೀಕ್ಷಿಸಿದ್ದ ಪಿಡಬ್ಲ್ಯು..14 ಡಾ. ಪಿ.ಡಿ. ಕುಮಾರ್ ಅವರು ಗಾಯ ಪ್ರಮಾಣಪತ್ರ-ನಿಶಾನೆ ಪಿ -14 ನ್ನು ನೀಡಿರುತ್ತಾರೆ.ಪ್ರಾಸಿಕ್ಯೂಟರ್ ವಾದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಕನ್ನೆಗಾಲ ನದಿ, ಪದಿಚೇರಾ ಗ್ರಾಮದಲ್ಲಿದಿನಾಂಕ: 01/02.10.2016 ರಂದು ಘಟನೆ ನಡೆದಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಲೋಪವ ನನಗೆ ಕಂಡುಬಂದಿರುವುದಿಲ್ಲ. ಆರೋಪಿಯ ಬಂಧನ ಮತ್ತು ಹಾಜರುಪಡಿಸುವುದಕ್ಕೆ ಸಂಬಂಧಿಸಿದಂತೆ ದೂರುದಾರನ ಹೇಳಿಕೆಯಲ್ಲಿ, ರೈಫಲ್‌ಅನ್ನು ಕಸಿದುಕೊಂಡು ಪಿಡಬ್ಲ್ಯು ಶಿ ಮೇಲೆ ಗುಂಡು ಹಾರಿಸಿರುವ ವಿಷಯ ವ್ಯಕ್ತವಾಗಿದೆ.ಇದಲ್ಲದೆ, ಸಾಕ್ಷ್ಯಗಳು ಸಹಜವಾಗಿವೆ.ಪಹರೆ ತಂಡವು ಲಭ್ಯ ಗ್ರಾಮಸ್ಥರನ್ನು ಕರೆದುಕೊಂಡು ಹೋಗುವುದನ್ನು ನಿರೀಕ್ಷಿಸಲಾಗುವುದಿಲ್ಲ, ಘಟನೆ ನಡೆದಿದೆ,

ಆದರೆ ಸ್ವತಂತ್ರ ಸಾಕ್ಷಿದಾರರು ನೋಡಿರಬಹುದು ಅಥವಾ ನೋಡಿಲ್ಲದೆ ಇರಬಹುದು ಎಂಬುದನ್ನು ಉಲ್ಲೇಖಿಸುವುದು ಸಹ ಅಗತ್ಯವಾಗಿದೆ.

25. ಆರೋಪಿಗಳ ಅಪರಾಧವನ್ನು ನಿರ್ಣಯಿಸುವುದಕ್ಕಾಗಿ ಇರುವ ಎರಡು ಅಪರಾಧಗಳು ಭಾರತ ದಂಡ ಸಂಹಿತೆಯ 353 ನೇ ಮತ್ತು 307 ನೇ ಪ್ರಕರಣಗಳ ಅಡಿಯಲ್ಲಿ ಬರುತ್ತವೆ.ದೂರುದಾರ, ಪಿಡಬ್ಲ್ಯು -2 ರಿಂದ 9 ರವರೆಗಿನ ಸಾಕ್ಷಿಗಳು ಎರಡೂ ಅಪರಾಧಗಳ ಬಗ್ಗೆ ನೀಡಿದ ಮೌಖಿಕ ಸಾಕ್ಷ್ಯವೆಂದರೆ, ಆರೋಪಿಗಳು ಅಧಿಕೃತ ಕರ್ತವ್ಯವನ್ನು ನಿರ್ವಹಿಸಲು ತಡೆಯೊಡ್ಡಿದ್ದಾರೆಂಬುದಾಗಿದೆ.ಈ ಸಂಬಂಧದಲ್ಲಿ, ಇಡೀ ಪಹರೆ ತಂಡವು ಕಾವಲುಗಾರನಿಂದ ಎ.ಸಿ.ಎಫ್.ವರೆಗಿನ ಅರಣ್ಯ ಸಿಬ್ಬಂದಿಗಳನ್ನು ಮಾತ್ರ ಒಳಗೊಂಡಿತ್ತು ಮತ್ತು ಅವರ ಕಣ್ಣಿಗೆ ಬಿದ್ದ ಆರೋಪಿಗಳು ಓಡಿ ಹೋಗಲು ಪ್ರಯತ್ನಿಸಿದಾಗ, ಅವರ ಪೈಕಿ ಇಬ್ಬರನ್ನು ಬಂಧಿಸಲಾಯಿತು; 1 ನೇ ಆರೋಪಿಯು ಕರುಣಾಕರ-ಪಿಡಬ್ಲ್ಯು .2 ರಿಂದ ರೈಫಲ್ಲನ್ನು ಕಿತ್ತುಕೊಂಡು, ದೂರುದಾರನ ಮೇಲೆ ಗುಂಡುಹಾರಿಸಿದನು, ಅದನ್ನು ಕೆಳಮುಖವಾಗಿ ಎಳೆದ ಕಾರಣದಿಂದ ಗುಂಡು ಎಡಗಾಲಿನ ಬೆರಳಿಗೆ ತಗಲಿತು ಎಂಬುದನ್ನು ಉಲ್ಲೇಖಿಸುವುದು ಅಗತ್ಯವಾಗಿದೆ.

26. ಹಾಗಾಗಿ, ಇದು ಒಬ್ಬ ಸರ್ಕಾರಿ ನೌಕರನನ್ನು ಕರ್ತವ್ಯ ನಿರ್ವಹಿಸುವುದರಿಂದ ತಡೆಯಲು ಅಥವಾ ಅಡ್ಡಿಪಡಿಸುವುದು ಗಣನೀಯ ಪ್ರಮಾಣದ ಅಡಚಣೆಯಾಗಿದೆ.ವ್ಯಕ್ತ ಕೃತ್ಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಆರೋಪಿಗಳು 10 ರಿಂದ 11 ವ್ಯಕ್ತಿಗಳನ್ನು ಒಳಗೊಂಡ ದೊಡ್ಡ ಗುಂಪಿನ ಭಾಗವಾಗಿದ್ದರೆಂದು ಹೇಳಲಾಗಿದೆ.ಆದಾಗ್ಯೂ, ಇಬ್ಬರನ್ನು ಬಂಧಿಸಲಾಯಿತು ಮತ್ತು ಇತರರು ತಪ್ಪಿಸಿಕೊಂಡರು.ಈ ಸಂದರ್ಭದಲ್ಲಿ, ಅಪರಾಧವು ಅರಣ್ಯ ಪ್ರದೇಶದಲ್ಲಿ ಮಧ್ಯ ರಾತ್ರಿ 12 ಗಂಟೆಗೆ, ಅದೂ ಸಹ ಯಾರೇ ಖಾಸಗಿ ವ್ಯಕ್ತಿಗೆ ಸೇರಿರದ ಸ್ಥಳದಲ್ಲಿ ಸಂಭವಿಸಿದೆ ಎಂಬುದನ್ನು ಉಲ್ಲೇಖಿಸುವುದು ಅಗತ್ಯವಾಗಿದೆ.1 ನೇ ಮತ್ತು 2 ನೇ ಆರೋಪಿಗಳ ಇರುವಿಕೆಯನ್ನು ನ್ಯಾಯಾಲಯದ ಮುಂದೆ ಸಾಬೀತುಪಡಿಸಲಾಗಿದ್ದು, ಅರಣ್ಯ ಪ್ರದೇಶದಲ್ಲಿ ಗುಂಪಿನೊಂದಿಗೆ ಅವರು ಕಂಡುಬಂದಿದ್ದಕ್ಕೆ ಏನು ಕಾರಣ ಎಂಬುದಕ್ಕೆ ಆರೋಪಿಯ ಪೈಕಿ ಒಬ್ಬರಿಂದಲೂ ಉತ್ತರವಿಲ್ಲ.ದೂರುದಾರರಿಗೆ ಆದ ಗಾಯವು ಸಾಮಾನ್ಯವಾದುದಾಗಿರದೆ, ಗುಂಡೇಟಿನ ಗಾಯವಾಗಿದೆ ಮತ್ತು ಅವರ ಕಾಲಿನ ಬೆರಳಿನ ಭಾಗವು ಬಳಸದಂತಾಗಿದೆ.ಸಾಮಾನ್ಯ ಉದ್ದೇಶ ಮತ್ತು ಆಶಯದ ಪರಿಕಲ್ಪನೆಯಷ್ಟರಮಟ್ಟಿಗೆ ಹೇಳುವುದಾದರೆ, ಅಪರಾಧ ಎಸಗಲು ಒಮ್ಮತವಿದ್ದಿತು.ಅದು ಅಪರಾಧ ಎಸಗುವ ಮುಂಚಿನ ಒಮ್ಮತ ಅಥವಾ ಒಟ್ಟಾಭಿಪ್ರಾಯವಾಗಿದ್ದು, ಅದು ಘಟನೆಯಲ್ಲಿ ಪಾಲ್ಗೊಂಡ 1 ನೇ ಮತ್ತು 2 ನೇ ಆರೋಪಿಗಳು ಅಪರಾಧವನ್ನು ಎಸಗಲು ಒಟ್ಟಭಿಪ್ರಾಯ ಹೊಂದಿದ್ದರೆಂಬುದನ್ನು ತೋರಿಸುತ್ತದೆ.ಅವರಲ್ಲಿ ಯಾರಾದರೊಬ್ಬರ ಮೂಲಕವಾದರೂ ಅಪರಾಧವು ಕಾರ್ಯರೂಪಕ್ಕೆ ಬರಬಹುದಾಗಿತ್ತು.

27. ಪರಿಣಾಮವಾಗಿ, ಅವರ ಮನಸ್ಸಿನಲ್ಲಿದ್ದಂಥ ಅಪರಾಧವನ್ನು ಅವರು ಎಸಗಿದರು.ಹಾಗಾಗಿ, ರೈಫಲ್‌ಅನ್ನು ಚಲಾಯಿಸುವ ಮೂಲಕ ಅಪರಾಧವನ್ನು ಎಸಗಲಾಯಿತೆಂದು ಹೇಳಿದಾಗ, ಅದು 1 ನೇ ಮತ್ತು 2 ನೇ ಆರೋಪಿಗಳು ಎಸಗಿದ ದೈಹಿಕ ಮತ್ತು ಮಾನಸಿಕ ಕೃತ್ಯವಾಗಿದೆ.ಪ್ರಸ್ತುತ ಮೊಕದ್ದಮೆಯಲ್ಲಿ, ಸಾಮಾನ್ಯ ಉದ್ದೇಶ, ಆಶಯ ಮತ್ತು ತತ್ಸಂಬಂಧಿ ಕೃತ್ಯಗಳನ್ನು ಆರೋಪಿಗಳು ರೂಪಿಸಿ, ಕಾರರೂಪಕ್ಕೆ ತಂದಿದ್ದಾರೆ.ಮಾನ್ಯ ನ್ಯಾಯಾಧೀಶರು ಅಪರಾಧ ನಿರ್ಣಯ ಮಾಡಿರುವುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, 1 ನೇ ಮತ್ತು 2 ನೇ ಆರೋಪಿಗಳು ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾದ 33 ನೇ ಮತ್ತು 307 ನೇ

ಪ್ರಕರಣಗಳ ಅಡಿಯಲ್ಲಿ ದಂಡನಾರ್ಹ ಅಪರಾಧವನ್ನು ಎಸಗಿದ್ದಾರೆ.ಆರೋಪಿಗಳು ವಿಚಾರಣೆಯನ್ನು ಎದುರಿಸದೆ ತಪ್ಪಿಸಿಕೊಂಡಿದ್ದರು.

28. 353 ನೇ ಪ್ರಕರಣವನ್ನು ಸ್ಥೂಲವಾಗಿ ಅವಲೋಕಿಸುವುದು ಅಗತ್ಯವಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

"353. ಲೋಕ ನೌಕರನು ತನ್ನ ಕರ್ತವ್ಯವನ್ನು ನಿರ್ವಹಿಸುವುದನ್ನು ತಡೆಯಲು ಹಲ್ಲೆ ಅಥವಾ ಅಪರಾಧಿಕ ಬಲ ಪ್ರಯೋಗ ಮಾಡುವುದು.ಲೋಕ ನೌಕರನಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿರುವ ಲೋಕ ನೌಕರನಾದ ಯಾರೇ ವ್ಯಕ್ತಿಗೆ ಅಥವಾ ಅಂಥ ಲೋಕ ನೌಕರನಾಗಿ ತನ್ನ ಕರ್ತವ್ಯವನ್ನು ನೆರವೇರಿಸದಂತೆ ಆ ವ್ಯಕ್ತಿಯನ್ನು ತಡೆಯುವ ಅಥವಾ ಹೆದರಿಸುವ ಉದ್ದೇಶದಿಂದ ಹಲ್ಲೆ ಮಾಡುವ ಅಥವಾ ಅಪರಾಧಿಕ ಬಲಪ್ರಯೋಗ ಮಾಡುವ ಅಥವಾ ಅಂಥ ಲೋಕ ನೌಕರನಾಗಿ ಆ ವ್ಯಕ್ತಿಯು ವಿಧಿಬದ್ಧವಾಗಿ ತನ್ನ ಕರ್ತವ್ಯವನ್ನು ನೆರವೇರಿಸುವಾಗ ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಯಾವುದೇ ಕಾರ್ಯದ ಪರಿಣಾಮವಾಗಿ ಆತನ ಮೇಲೆ ಹಲ್ಲೆ ಮಾಡುವ ಅಥವಾ ಅಪರಾಧಿಕ ಬಲಪ್ರಯೋಗ ಮಾಡುವ ಯಾರೇ ವ್ಯಕ್ತಿಯು ಎರಡು ವರ್ಷಗಳವರೆಗಿನ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು. "

353 ನೇ ಪ್ರಕರಣವು, ಸರ್ಕಾರಿ ನೌಕರನಿಗೆ ಹಲ್ಲೆ ಅಥವಾ ಅಪರಾಧಿಕ ಬಲ ಪ್ರಯೋಗ ಮಾಡುವುದು, ಅವನು ತನ್ನ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಆತನನ್ನು ತಡೆಯುವುದಕ್ಕೆ ಸಂಬಂಧಿಸಿರುತ್ತದೆಂದು ಸ್ಪಷ್ಟವಾಗಿ ಹೇಳುತ್ತದೆ.

29. ಪಹರೆ ತಂಡದ 1 ರಿಂದ 10 ರವರೆಗಿನ ಸಿಬ್ಬಂದಿಯ ಹೇಳಿಕೆಗೆ ಸಂಬಂಧಿಸಿದಂತೆ ಯಾವುದೇ ವಿವಾದವಿಲ್ಲ.ಸರ್ಕಾರಿ ನೌಕರನ ಸ್ಥಾನಮಾನದ ಬಗ್ಗೆ ವಿವಾದವಿಲ್ಲ, ಅವರ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ೧ ಅವರನ್ನು ತಡೆಯಲಾಗಿತ್ತು ಮತ್ತು ಅಡಚಣೆ ಒಡ್ಡಲಾಗಿತ್ತು ಎಂಬುದು ಯಾವುದೇ ಸಂಶಯದ ಛಾಯೆಯೂ ಇಲ್ಲದಂತೆ ಸಾಬೀತಾಗಿದೆ.ಹಾಗಾಗಿ, ಮೌಖಿಕ ಸಾಕ್ಷ್ಯ ಮತ್ತು ತತ್ಸಂಬಂಧಿ ಸಂದರ್ಭಗಳ ಆಧಾರದಿಂದ, ಪ್ರತ್ಯಕ್ಷ ಸಾಕ್ಷಿಗಳಾಗಿರುವ ಪಿಡಬ್ಲ್ಯು, 2 ರಿಂದ 10 ಇವರಲ್ಲಿ ಬಹುತೇಕರುದಿನಾಂಕ: 01.10.2006 ರಂದು ಕನ್ನೆಗಾಲದಲ್ಲಿ ಆರೋಪಿಗಳಿಂದ ಜೀವ ಭಯ ಎದುರಿಸಿರುವ ಬಾಧಿತ ವ್ಯಕ್ತಿಗಳಾಗಿರುವುದು ಸಂಶಯಾತೀತವಾಗಿ ಸಾಬೀತಾಗಿದೆ.ಹಾಗಾಗಿ, ಎರಡೂ ಪ್ರಕರಣಗಳ ಅಂಶಗಳು ಹಾಗೂ ಪ್ರಾಸಿಕ್ಯೂಷನ್ ಮತ್ತು ಮಾನ್ಯ ವಿಚಾರಣಾ ನ್ಯಾಯಾಧೀಶರ ನಿರ್ಣಯಗಳು 1 ನೇ ಮತ್ತು 2 ನೇ ಆರೋಪಿಗಳು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು, ನಂತರ ರೈಫಲ್ ಕಸಿದುಕೊಂಡು, ದೂರುದಾರನ ಮೇಲೆ ಗುಂಡು ಹಾರಿಸಿರುವುದು ಹಾಗೂ ರೈಫಲ್ ಬ್ಯಾರೆಲ್‌ಅನ್ನು ಸಮಯೋಚಿತವಾಗಿ ಕೆಳಮುಖವಾಗಿ ಎಳೆದ ಕ್ರಿಯೆಯ ಕಾರಣದಿಂದ ದೂರುದಾರನ ಕಾಲೊರಳಿಗೆ ಗುಂಡು ಹಾರಿತು ಎಂಬ ಅಂಶಗಳಿಗೆ ಸಂಬಂಧಿಸಿದ ವಿಷಯಗಳು ಸಂಶಯಾತೀತವಾಗಿ ಸಾಬೀತಾಗಿವೆ ಎಂದು ನನಗೆ ಕಂಡುಬಂದಿದೆ.ಇತರ ಅಪರಾಧಗಳಿಗೆ ಸಂಬಂಧಿಸಿದಂತೆ ಆರೋಪಿಗಳ ಖುಲಾಸೆಗೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಮೇಲಿನ ಪ್ರಕರಣಗಳ ಜೊತೆಗೆ ಹಲವಾರು ಪ್ರಕರಣಗಳನ್ನು ಸೇರಿಸಲಾಗಿತ್ತು ಎಂಬುದು ನನಗೆ ಕಂಡುಬಂದಿದೆ.ಯಾವ ಉತ್ತಮ ಕಾರಣಗಳಿಗಾಗಿ ಆ ಪ್ರಕರಣಗಳನ್ನು ಸೇರಿಸಲಾಯಿತು ಎಂಬುದು ತಿಳಿಯದಾಗಿದೆ ಮತ್ತು ಮಾನ್ಯ ನ್ಯಾಯಾಧೀಶರು, ಭಾರತ ದಂಡ ಸಂಹಿತೆಯ 149

ನೇ ಪ್ರಕರಣದೊಂದಿಗೆ ಓದಲಾದ 143, 147, 148 ಮತ್ತು 447 ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ 1 ನೇ ಮತ್ತು 2 ನೇ ಆರೋಪಿಗಳನ್ನು ಖುಲಾಸೆಗೊಳಿಸಿರುವುದು ಸರಿಯಾಗಿಯೇ ಇತ್ತು.

30. ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾದ 353 ನೇ ಪ್ರಕರಣದ ಅಡಿಯಲ್ಲಿ 1 ನೇ ಆರೋಪಿಯು ದಂಡನೀಯ ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯಾಗಿದ್ದು, ಎರಡು ವರ್ಷಗಳ ಅವಧಿಗಾಗಿ ಸಾದಾ ಕಾರವಾಸದ ಶಿಕ್ಷೆಗೆ ಒಳಗಾಗಿದ್ದಾನೆ ಹಾಗೂ ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾಗುವ 307 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಐದು ವರ್ಷಗಳ ಸಾದಾ ಕಾರಾವಾಸದ ಶಿಕ್ಷೆಗೆ ಮತ್ತು ಎರಡು ವರ್ಷಗಳ ಅವಧಿಗಾಗಿ ಕಠಿಣ ಕಾರಾವಾಸದ ಶಿಕ್ಷೆಗೆ ಒಳಗಾಗುವ ಹಾಗೂ 5,000/- ರೂ.ಗಳ ಜುಲ್ಮಾನೆ ಸಂದಾಯ ಮಾಡಲು ಮತ್ತು ತಪ್ಪಿದಲ್ಲಿ, ಎಂಟು ತಿಂಗಳುಗಳ ಅವಧಿಗಾಗಿ ಹೆಚ್ಚಿನ ಸಾದಾ ಕಾರಾವಾಸದ ಶಿಕ್ಷೆಗೆ ಒಳಗಾಗುವ ಶಿಕ್ಷೆಯನ್ನು ವಿಧಿಸಲಾಗಿದೆ.1 ನೇ ಆರೋಪಿಯ ಮೇಲೆ ವಿಧಿಸಿದ ಜುಲ್ಮಾನೆ ಮೊತ್ತದ ಪೈಕಿ 4,000/ ರೂ.ಗಳ ಮೊತ್ತವನ್ನು, ಪರಿಹಾರವಾಗಿ ಪಿಡಬ್ಲ್ಯು .1-ರವಿಕುಮಾರ್ಗೆ ಸಂದಾಯ ಮಾಡತಕ್ಕದ್ದು.

31. ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾದ 353 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧದ ಸಂಬಂಧದಲ್ಲಿ ಅಪೀಲುದಾರನಾಗಿರುವ 2 ನೇ ಆರೋಪಿಯನ್ನು ಮಾನ್ಯ ವಿಚಾರಣಾ ನ್ಯಾಯಾಧೀಶರು ಅಪರಾಧಿಯೆಂದು ನಿರ್ಣಯಿಸಿದ್ದಾರೆ ಮತ್ತು ಎರಡು ವರ್ಷಗಳ ಅವಧಿಗಾಗಿ ಸಾದಾ ಕಾರಾವಾಸದ ಶಿಕ್ಷೆ ವಿಧಿಸಿದ್ದಾರೆ.ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾದ 307 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧದ ಸಂಬಂಧದಲ್ಲಿ, ಮೂರು ವರ್ಷಗಳ ಅವಧಿಗಾಗಿ ಸಾದಾ ಕಾರಾವಾಸಕ್ಕೆ ಒಳಗಾಗುವಂತೆ ಆರೋಪಿಗೆ ಶಿಕ್ಷೆ ವಿಧಿಸಿದ್ದಾರೆ ಹಾಗೂ ಎರಡೂ ಶಿಕ್ಷೆಗಳು ಸಮವರ್ತಿಯಾಗಿ ಮುಂದುವರಿಯತಕ್ಕದ್ದು ಮತ್ತು 1 ನೇ ಮತ್ತು 2 ನೇ ಆರೋಪಿಗಳಲ್ಲಿ ಯಾರಾದರೂ ಬಂಧನದ ಅವಧಿಯನ್ನು ಅನುಭವಿಸಿದ್ದರೆ, ದಂಡ ಪ್ರಕ್ರಿಯಾ ಸಂಹಿತೆಯ 428 ನೇ ಪ್ರಕರಣದ ಅಡಿಯಲ್ಲಿ ಪರ್ಯಾಯ ಪರಿಹಾರ ನೀಡತಕ್ಕದ್ದು.

32. ಪ್ರಸ್ತುತ ಮೊಕದ್ದಮೆಯಲ್ಲಿ, ಅಪೀಲುದಾರನು 2 ನೇ ಆರೋಪಿಯಾಗಿದ್ದಾನೆ.1 ನೇ ಆರೋಪಿಯು ಯಾವುದೇ ದಾವೆಯನ್ನು ಹೂಡಿಲ್ಲವೆಂದು ನಿವೇದಿಸಿಕೊಳ್ಳಲಾಗಿದೆ ಮತ್ತು ಜಿಲ್ಲಾ ನ್ಯಾಯಾಧೀಶರು ಹೊರಡಿಸಿದ ಆದೇಶದಂತೆ ಶಿಕ್ಷೆಯನ್ನು ಜಾರಿಗೊಳಿಸಲಾಗಿದೆ.ಪ್ರಸ್ತುತ ಆರೋಪಿಗೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ,ದಿನಾಂಕ: 05.01.2001 ರಂದು ಈ ನ್ಯಾಯಾಲಯವು ಶಿಕ್ಷೆಯನ್ನು ತಡೆಹಿಡಿದಿದ್ದರಿಂದ ಆತನು ಜಾಮೀನಿನ ಮೇಲಿದ್ದನು.

33. ಅಪೀಲುದಾರನ ಪರ ಮಾನ್ಯ ನ್ಯಾಯವಾದಿ ಶ್ರೀ ಅಮರ್ ಕೋರೆ ಅವರು, ಅಪೀಲುದಾರ ಮತ್ತು ಆತನ ಕುಟು ೦ ಬವು ತು ೦ ಬಾ ತೊಂದರೆಯಲ್ಲಿರುವುದರಿಂದ ಹಾಗೂ ಅಪೀಲುದಾರನು ಕುಟುಂಬಕ್ಕಾಗಿ ಇರುವ ಏಕೈಕ ಗಳಿಕೆದಾರನಾಗಿದ್ದು, ಆತನ ಕುಟುಂಬಕ್ಕೆ ಅನನುಕೂಲ ಉಂಟಾಗುವುದರಿಂದ ವಿಧಿಸಲಾದ ದಂಡನೆಯು ಕಠಿಣವಾಗಿದೆ ಎಂದು ನಿವೇದಿಸಿಕೊಂಡಿರುವರು.

34. ಭಾರತ ದಂಡ ಸಂಹಿತೆಯ 353 ನೇ ಪ್ರಕರಣದ ಅಡಿಯಲ್ಲಿನ ಅಪರಾಧವು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾಗಿರುವ ಕಾರಾವಾಸ ಶಿಕ್ಷೆ ಅಥವಾ ಜುಲ್ಮಾನೆ ಅಥವಾ ಎರಡನ್ನು ಒಳಗೊಂಡ ದಂಡನೀಯ ಅಪರಾಧವಾಗಿದೆ ಮತ್ತು 307 ನೇ ಪ್ರಕರಣದ ಅಡಿಯಲ್ಲಿನ ಅಪರಾಧವು, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾಗಿರುವ ಕಾರಾವಾಸ ಶಿಕ್ಷೆ ಹಾಗೂ ಜುಲ್ಮಾನೆಗೆ ಸಹ ಗುರಿಯಾಗತಕ್ಕ ಎ ದಂಡನೀಯ ಅಪರಾಧವಾಗಿದೆ.

35.ದಿನಾಂಕ: 05.01.2011 ರಂದು ವಿಧಿಸಿದ ಶಿಕ್ಷೆಯನ್ನು ಅಮಾನತ್ತಿನಲ್ಲಿರಿಸಿದ ನಂತರ, ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತೆಂದು ಮತ್ತು ಉಳಿದ ಶಿಕ್ಷೆಗೆ ಆತನು ಸೆರೆಮನೆಗೆ ಹೋದರೆ, ಅದು ಕುಟುಂಬವನ್ನೇ ಅಸ್ತವ್ಯಸ್ತಗೊಳಿಸುವುದೆಂದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ ಹಾಗೂ ದಯಾಪರವಾಗಿ ನಡೆದುಕೊಳ್ಳಬೇಕೆಂದು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿದ್ದಾರೆ.ಉಚ್ಚ ನ್ಯಾಯಾಲಯದ ಮಾನ್ಯ ಸರ್ಕಾರಿ ನ್ಯಾಯವಾದಿಗಳು (ಫೀಡರ್) ಇದನ್ನು ವಿರೋಧಿಸಿದ್ದಾರೆ.

36. ಮಾನ್ಯ ವಿಚಾರಣಾ ನ್ಯಾಯಾಧೀಶರು, ಭಾರತ ದಂಡ ಸಂಹಿತೆಯ 353 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಜುಲ್ಮಾನೆ ಇಲ್ಲದೆ ಎರಡು ವರ್ಷಗಳ ಸಾದಾ ಕಾರಾವಾಸದ ಶಿಕ್ಷೆಯನ್ನು ಹಾಗೂ ಭಾರತ ದಂಡ ಸಂಹಿತೆಯ 307 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಜುಲ್ಮಾನೆ ಇಲ್ಲದೆ ಮೂರು ವರ್ಷಗಳ ಸಾದಾ ಕಾರಾವಾಸದ ಮುಖ್ಯ ಶಿಕ್ಷೆಯನ್ನು ವಿಧಿಸಿದ್ದಾರೆ.  ಮಾನ್ಯ ವಿಚಾರಣಾ ನ್ಯಾಯಾಧೀಶರು ಗಮನಿಸದಿರುವ ಕಾನೂನಿನ ಸಂಗತಿಯೆಂದರೆ, ಭಾರತ ದಂಡ ಸಂಹಿತೆಯ 307 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಜುಲ್ಮಾನೆ ವಿಧಿಸುವುದು ಕಡ್ಡಾಯವಾಗಿದೆ.ಆದಾಗ್ಯೂ, ಸದರಿ ತಪ್ಪನ್ನು ಸರಿಪಡಿಸಲಾಗಿದೆ.

37. ಎರಡೂ ಕಡೆಯವರ ವಾದಗಳ ಆಲಿಸಿದ ನಂತರ, ಈ ನ್ಯಾಯಾಲಯವು, ಎರಡು ವರ್ಷಗಳ ಅವಧಿಯು ಉದ್ದೇಶವನ್ನು ಈಡೇರಿಸುತ್ತದೆ ಎಂದು ಅಭಿಪ್ರಾಯಪಟ್ಟಿದೆ.ಹಾಗಾಗಿ, ಅಪೀಲು ಭಾಗಶಃ ಪುರಸ್ಕರಿಸಲು ಯೋಗ್ಯವಾಗಿದೆ.

ಅಪೀಲನ್ನು ಭಾಗಶಃ ಪುರಸ್ಕರಿಸಲಾಗಿದೆ.ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾದ 353 ನೇ ಮತ್ತು 307 ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ 2 ನೇ ಆರೋಪಿಯ ಅಪರಾಧವನ್ನು ನಿರ್ಣಯಿಸಿ, ಎಸ್.ಸಿ.ಸಂಖ್ಯೆ: 79/2007 ರಲ್ಲಿ ಹೊರಡಿಸಿದದಿನಾಂಕ: 16.07.2010 ರ ತೀರ್ಪನ್ನು ಸ್ಥಿರೀಕರಿಸಲಾಗಿದೆ.ಆದರೆ, ಕಾರಾವಾಸದ ಶಿಕ್ಷೆಯನ್ನು ಮಾರ್ಪಾಡು ಮಾಡುವ ಮತ್ತು ಶಿಕ್ಷೆಯನ್ನು ಕಡಿಮೆ ಮಾಡುವ ಉದ್ದೇಶಕ್ಕಾಗಿ ತಳ್ಳಿಹಾಕಲಾಗಿದೆ.

ಭಾರತ ದಂಡ ಸಂಹಿತೆಯ 353 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಅಪರಾಧ ನಿರ್ಣಯ ಮತ್ತು ಶಿಕ್ಷೆಯನ್ನು ಸ್ಥಿರೀಕರಿಸಲಾಗಿದೆ ಮತ್ತು ಭಾರತ ದಂಡ ಸಂಹಿತೆಯ 307 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಅಪರಾಧ ನಿರ್ಣಯವನ್ನು ಸ್ಥಿರೀಕರಿಸಲಾಗಿದೆ ಮತ್ತು ಶಿಕ್ಷೆಯನ್ನು 5,000/- ರೂ.ಗಳ ಜುಲ್ಮಾನೆ ಸಹಿತ ಮೂರು ವರ್ಷಗಳಿಂದ ಎರಡು ವರ್ಷಗಳಿಗೆ ಕಡಿಮೆಗೊಳಿಸುವ ಮೂಲಕ ಬದಲಾಯಿಸಲಾಗಿದೆ.ಜುಲ್ಮಾನೆ ಮೊತ್ತವನ್ನು

ಸಂದಾಯ ಮಾಡಲು ತಪ್ಪಿದಲ್ಲಿ, ಆರೋಪಿಯು ಮೂರು ತಿಂಗಳುಗಳ ಅವಧಿಗಾಗಿ ಸಾದಾ ಕಾರಾವಾಸದ ಶಿಕ್ಷೆಗೆ ಗುರಿಯಾಗತಕ್ಕದ್ದು.